ವಸೀಗರನ್ ಅರ್ಥಾತ್ ರಜನೀಕಾಂತ್ ಇರುವ ರೋಬೋಟಿಕ್ ಪ್ರಯೋಗಾಲಯದಲ್ಲಿ ಕಲಿಯಲೆಂದು ಆಸಕ್ತರಾದ ಯುವಕ–ಯುವತಿಯರ ತಂಡದಲ್ಲಿನ ಒಬ್ಬ ಆ್ಯಮಿ ಜಾಕ್ಸನ್‌ಳನ್ನು ಪ್ರೇಮಿಸತೊಡಗುತ್ತಾನೆ. ಆಮೇಲೆ ಅವಳು ರೊಬೋ ಎಂದು ಗೊತ್ತಾದದ್ದೇ ಹಳೆ ಹುಡುಗಿಯ ಕಡೆ ಮತ್ತೆ ವಾಲುತ್ತಾನೆ. ಆ ಹುಡುಗಿ ಇನ್ನೊಬ್ಬನ ಬೈಕ್ ಹತ್ತುತ್ತಾಳೆ. ಅವನು ಮೊಬೈಲ್‌ನಲ್ಲೇ ಅವಳನ್ನು ಮತ್ತೆ ತನ್ನತ್ತ ಓಲೈಸಿಕೊಳ್ಳುವ ಯತ್ನದಲ್ಲಿರುವಾಗಲೇ ಯಾವುದೋ ಶಕ್ತಿ ಆ ಮೊಬೈಲ್ ಹಾರಿಸಿಕೊಂಡು ಹೋಗುತ್ತದೆ. ಕೈಯಲ್ಲಿದ್ದ ಮೊಬೈಲ್ ಗೋವಿಂದ.

ತಮಿಳು ನಿರ್ದೇಶಕ ಎಸ್. ಶಂಕರ್ '2.0' ಸಿನಿಮಾವನ್ನು ಕನೆಕ್ಟ್ ಮಾಡುವುದು ಈ ಬಿಂದುವಿನಿಂದ. ಸೆಲ್ಫಿ ತೆಗೆಯುವ ಹುಡುಗಿ, ಹೊಲದ ಮರದಡಿಯಲ್ಲಿ ಕೂತ ರೈತಮಹಿಳೆ, ಮೀನು ಮಾರುಕಟ್ಟೆಯಲ್ಲಿನ ಜನ, ಐಷಾರಾಮಿ ಹೋಟೆಲ್‌ನಲ್ಲಿ ಕುಳಿತ ಕಾರ್ಪೊರೇಟಿಗರು – ಹೀಗೆ ಎಲ್ಲರ ಕೈಗಳ ಮೊಬೈಲ್‌ಗಳೂ ಹಾರಿಹೋಗುತ್ತವೆ.

ಇವನ್ನೆಲ್ಲ ಸ್ಯಾಂಪಲ್ ಎನ್ನುವಂತೆ ಅಷ್ಟೇ ತೋರದ ಶಂಕರ್, ದೃಶ್ಯವತ್ತಾಗಿ ತೋರಿಸುತ್ತಾ ನಮ್ಮ ಕಣ್ಣುಗಳನ್ನು ಕೀಲಿಸಿಕೊಳ್ಳುತ್ತಾರೆ. ಮೊಬೈಲ್ ಹಾರಿಹೋಗುವ ವೇಗ, ವೈಖರಿಯನ್ನು ಮೂರು ಆಯಾಮದ (3ಡಿ) ತಂತ್ರಜ್ಞಾನದಲ್ಲಿ ನೋಡುತ್ತಾ ನಾವು ಪರವಶರಾಗಬೇಕು.

ಹೀಗೆ ಹಾರಿಹೋದ ಮೊಬೈಲ್‌ಗಳನ್ನೆಲ್ಲ ರಾಶಿ ಹಾಕಿಕೊಂಡ ಬೃಹತ್ ಪಕ್ಷಿಯೊಂದು ಹಾರಿಬಂದು ನಗರಕ್ಕೆ ದಾಳಿಇಡುತ್ತದೆ. ಅದರಿಂದ ಅಮಾಯಕ ಜನರನ್ನು ಬಚಾವು ಮಾಡಲು ರೊಬೋ ಚಿಟ್ಟಿಗೆ ವಸೀಗರನ್ ಮತ್ತೆ ಜನ್ಮ ನೀಡಬೇಕು. ಆದರೆ, ಅದಕ್ಕೆ ಆಡಳಿತಾತ್ಮಕ ತೊಡಕು. ಆ ಪಕ್ಷಿ ಒಟ್ಟು ಮಾಡಿದ ಮೊಬೈಲ್‌ಗಳು ಆಕಾರ ಪಡೆದು ಎಲ್ಲಿ ತಮ್ಮನ್ನೂ ನುಂಗಿಹಾಕಿಯಾವೋ ಎಂಬ ಆತಂಕದಲ್ಲಿ ಗೃಹ ಸಚಿವರು ಚಿಟ್ಟಿಗೆ ಮರುಜನ್ಮ ನೀಡಲು ವಸೀಗರನ್‌ಗೆ ಸೂಚಿಸುತ್ತಾರೆ. ಅಲ್ಲಿಗೆ ಮತ್ತೆ ಚಿಟ್ಟಿಯ ಹುಟ್ಟು. ಪಕ್ಷಿರಾಜನ ದಾಳಿಯಿಂದ ಆಗುವ ಅನಾಹುತವನ್ನು ತಗ್ಗಿಸುವ ಚಿಟ್ಟಿಯ ಸಾಹಸಗಳನ್ನೂ ನಾವು '3ಡಿ'ಯಲ್ಲಿ ನೋಡುತ್ತೇವೆ.

ಮಲಗಿದ ಕೋಣೆಯಲ್ಲಿ ಇದ್ದಕ್ಕಿದ್ದಂತೆ ಮೊಬೈಲ್ ವೈಬ್ರೇಟರ್ ಟೋನ್. ಅದನ್ನು ಕೇಳುವ ಪಾತ್ರಕ್ಕೆ ಆತಂಕ. ನೋಡುವ ನಮಗೂ ಆತಂಕ ಆಗಬೇಕು, ಹಾಗಿದೆ ಹಿನ್ನೆಲೆಯ ಧ್ವನಿ. ಅದರಲ್ಲೂ ವೈಬ್ರೇಟರ್ ಶಬ್ದವಂತೂ ಕೊಯ್ಯುವಷ್ಟು ತೀವ್ರ. ಆಮೇಲೆ ಇಡೀ ಕೋಣೆಯ ಎಲ್ಲಾ ಗೋಡೆಗಳೂ ಮೊಬೈಲ್‌ಮಯ. ಅವುಗಳ ಪರದೆಗಳ ಮೇಲೆಲ್ಲ ಹಕ್ಕಿಗಳು. ಒಂದು ಮೊಬೈಲ್ ಮಲಗಿದವನ ಬಾಯೊಳಗೆ ನುಗ್ಗುತ್ತದೆ. ಮುಂದಿನ ದೃಶ್ಯದಲ್ಲಿ ಅವನು ರಕ್ತ ಕಾರಿಕೊಂಡು ಸತ್ತಿರುತ್ತಾನೆ. ಹೀಗೆ ಮೊಬೈಲ್‌ಗಳ ಪ್ರವಾಹ ಹರಿದುಬಂದು ಅವನನ್ನು ಆಪೋಷನ ಪಡೆದದ್ದಾದರೂ ಯಾಕೆ? ಇಂಥದ್ದೊಂದು ಪ್ರಶ್ನೆಯನ್ನೂ ನಮಗೆ ತೀವ್ರವಾದ '3ಡಿ' ದೃಶ್ಯಗಳು ಒಡ್ಡುತ್ತವೆ.

